ಮೈಸೂರ ಗೆಜೆಟ್ಟ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 1, ಸ್ಯ 1885.

ಸೂಚನೆ ಈ ಭಾಗವನ್ನು ವ್ಯತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್ ಆಫೀಸರ್‌ಸ್ ಡಿಪಾರ್ಟ್‌ಮೆಂಟರು, ಚೀಫ್ ಜಡ್ಜೀರು ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ ಪರಾ ಬರೆಯಲ್ಪಡಬಹುದಾದಂತಾ ಸದರೀ ಸೂಲದ ಡಿಬೆಂಜರ್‌ಗಳ ವೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಆವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಜರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಜರ್‌ಗಳನ್ನು ಎಫೇಸ್‌ಮೆಂಟ್ ಯಾನೇ ಪರಾ ಬಗ್ಯೆ ಇವರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ವೇಲೆ, ಡ್ಯೂಪ್ಲಿಕೇಟುಚ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ತಿಕ್ಕಿದೇಕೋದಾರ ಗೋರಬಿದನೂರು ತಾಲ್ಲೂಕು ಕಾಮಗಾನಹಳ್ಳಿ ಬೈರಪ್ಪನ ವಿಷಯದಲ್ಲಿ—

ಸ್ಯ 1885ನೇ ಇಸವಿ ದಿವಾಳಿ ಕೇಸ್ ನಂಬರು 32.

ಮೇಲ್ಕಂಡ ಬೈರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀರು ಸಿ. ಕ್ರೈಸ್ ಸಾಹೇಬರ ರೂಬರೂ ಅರ್ಜೀದಾರನಾದ ಬೈರಪ್ಪನ ಪರವಾಗಿ ಪಿ. ನಂಜುಂಡಯ್ಯನವರನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಹೇದಾರು) ತಮಗೆ ಈ ದರ್ಖಾಸ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯೂಗಲಿ ಅಥವಾ ಲಾಯರ್ ಮೂಲಕವಾಗಿಯೂಗಲಿ ಹಾಜರಾಗುವದಕ್ಕೆ ತಪ್ಪಿ ಹೋದವರು, ಯಾರಂದರೆ—1ನೇ ದೊಡ್ಡ ಅಪ್ಪಂಣ, 2ನೇ ಮಾರಪ್ಪ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಬೈರಪ್ಪನು ಹೊಂದುವದಕ್ಕೆ ಹಕ್ದುದಾರನಾಗುವದರ ಮೂಲಕ ದಿವಾಳೀಯೂದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯೂದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯೂವ ಸಾಲಕ್ಕೂ ಇವನ್ಕರವಾಗಿಯೂಗಲಿ ದಸ್ತಗಿರೀ ಮೂಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮೂಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರು.	ಲೇಹೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಲಗು.	ಯೂನಾಗ ದೆಣಿ ಹೊಂಬುದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇ ಯೇನಾದರೂ ಇದ್ದರೆ.	ಷ್ಣ.
1	ಗೋರಿಬಿದನೂರು ತಾ|| ಗೊಯಿಲ್‌ಕಳ್ಳಿಲಿರುವ ದೊಡ್ಡ ಅಪ್ಪಂಣ.	100 0 0	..	..	
2	ಚಿಕ್ಕಬಳ್ಳಾಪುರದ ಅಂಕಣಗುಂಟೀಲಿರುವ ಮಾರಪ್ಪ.	451 13 0	..	ಡಿಕ್ರೀ ಬಾಬತು.	

1885ನೇ ಇಸವಿ ಮಾರ್ಚಿ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಕೋಲಾರದಲ್ಲಿರುವ ದೀವಾಳಿಯಾದ ಡಿಕ್ರೀ ದೇಹೇದಾರ ಆಂಣಯ್ಯನ ವಿಷಯದಲ್ಲಿ—

ಸ್ ೧೮೮೫ನೇ ಇಸವಿ ದಿವಾಳಿ ಕೇಸ್ ನಂಬರ್ 64.

ಮೇಲ್ಕಂಡ ಆಂಣಯ್ಯನು ನಿರ್ಬಂಧದಿಂದ ಖುಲಾಸೆಯೂಗಬೇಕೆಂದು ಕೊಟ್ಟ ಅರ್ಜಿ ಅಂಕವು ಸಬ್ ಜಡ್ಜ್‌ರು ಸಿ. ಕ್ರೈಸ್ ಸಾಹೇಬರ ರೂಬರೂ ಅರ್ಜಿದಾರನಾದ ಆಂಣಯ್ಯನ ಪರವಾಗಿ ಮತ್ತು ಸದರೀಯವನ ಲೇಹೇದಾರರಾದ 1ನೇ ಗುರುಮೂರ್ತಿ, ಯೇಕಾಂಬರವೊದಲಿ ಇವರುಗಳ ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಹೇದಾರು) ತಮಗೆ ಈ ದರ್ಖಾಸ್ತ್ ನೋಟಿಸ್ ಜಾರಿಯೂಗಿದ್ದಾಗ್ಯೂ ಖುದ್ದಾಗಿಯೂಗಲಿ ಅಥವಾ ಲಾಯರ್ ಮೂಲಕವಾಗಿಯೂಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—2ನೇ ತಿಂಮಪ್ಪ ಮೇಸ್ತ್ರಿ, 3ನೇ ಭುಜಂಗರಾವ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಆಂಣಯ್ಯನು ಹೊಂದುವದಕ್ಕೆ ಹಕ್ದುದಾರನಾಗುವದರ ಮೂಲಕ ದಿವಾಳಿಯೂದವನೆಂದು ತೀರ್ಮಾನಿಸಲ್ಪಟ್ಟಿರುತ್ತೆದೂಗಿ ಸದರೀ ದಿವಾಳಿಯೂದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯೂವ ಸಾಲಕ್ಕೂ ಇವನ್ಕರವಾಗಿಯೂಗಲಿ ದಸ್ತಗಿರಿ ಮೂಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮೂಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮೂಡಲ್ಪಟ್ಟಿರುತ್ತೆ.

ಸ್ ೧೮೮೫ನೇ ಇಸವಿ ಮೇ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಲೀ ಕೊಡಲ್ಪಟ್ಟಿತು.

ನಂಬರು.	ಲೇಹೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಲಗು.	ಯೂನಾಗ ದೆಣಿ ಹೊಂಬುದದ್ದು.	ದೇಣಿಯ ಸ್ವಭಾವ ಮತ್ತು ಅವರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷ್ಣ.
1	ನೇ ಕೋಲಾರದ ಗುರುಮೂರ್ತಿ ಶಾಸ್ತ್ರಿ ..	45	..	ಡಿಕ್ರೀ ಬಾಬತು	
2	ಡಿಟೋ ತಿಂಮಪ್ಪ ಮೇಸ್ತ್ರೀ ..	8	..	ಪತ್ರದ ಬಾಬತು	
3	ಡಿಟೋ ಭುಜಂಗರಾವ್ ..	40	..	ಡಿಟೋ	

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರಲ್ಲಿರುವ ವೆಂಕಟನಾಮಿನಾಯಿಡು ಮಗ ಸುಬ್ಬರಾಯಲುನಾಯಿಡು ವಿಷಯದಲ್ಲಿ—

ಸ॥ 1885ನೇ ಇಸವಿ ದಿವಾಳಿ ಕೇಸ್ ನಂಬರ್ 111.

ಹುಕ್ಕುಂ.

ಮೇಲ್ಕಂಡ ಸುಬ್ಬರಾಯನಾಯಿಡುನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಆರ್ಜಿ ಅಂಕವು ಸಬ್ ಜಡ್ಜೀರು ವೆ॥ ಸಿ. ಕೈಸ್ ಸಾಹೇಬರ ರೂಬರೂ ಆರ್ಜಿದಾರನಾದ ಸುಬ್ಬರಾಯನಾಯಿಡುನ ಪರವಾಗಿ ವೆ॥ ರಾಮಸ್ವಾಮಯ್ಯಂಗಾರನ್ನು ಮತ್ತು ಸದರೀ ಯವನ ಲೇಣೇದಾರ್ರಾದ 1ನೇ ವ್ಯಾಸರಾವು, 2ನೇ ಅಬ್ಬಾಯಿ ಕೆಟ್ಟಿ, ಭಿಮರಾಯರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—6ನೇ ವಿಟ್ಟಾಕೇಟ್, 7ನೇ ಕ್ರಿಷ್ಣಾಜಿ, 8ನೇ ಕೋದಂಡರಾಮಕೆಟ್ಟಿ, 9ನೇ ನಾಗಣ್ಣ, 10ನೇ ಮೈಸೂರು ಜನರಲ್ ಬ್ಯಾಂಕ್, 11ನೇ ಚಂಗಲರಾಯಕೆಟ್ಟಿ. 12ನೇ ಗೋಪಾಲನಾಯಿಡು, 13ನೇ ಮನವರಸಾಬಿ, 2ನೇ ಬೆಂಗಳೂರು ಹಿಂದೂಬ್ಯಾಂಕ್, 3ನೇ ಬೆಂಗಳೂರು ಮೈಸೂರು ಬ್ಯಾಂಕ್.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸುಬ್ಬರಾಯನಾಯಿಡುನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆ ಆಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿದ್ದಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸೆ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1885ನೇ ಇಸವಿ ಜೂ॥ 18ನೇ ತಾರೀಖಿನಲ್ಲಿ ಕೋರ್ಟು ಪ್ರೊಹರ್‌ನಿಸಿ ನಮ್ಮ ದಸ್ತಖತ್‌ನಿಸೀ ಕೊಡೋಣಾಗಿದೆ.

ಸಾಲದ ಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಡಬೇಕು.			ಯಾವಾಗ ದೇಣಿ ಬರಬೇಕಾಗಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರಲ್ಲಿರತಕ್ಕ ವ್ಯಾಸರಾಯರಿಗೆ ಕೊಡತಕ್ಕದ್ದು ..	40	12	0	..	..	
2	ಬೆಂಗಳೂರು ಹಿಂದೂಬ್ಯಾಂಕಿಗೆ ಕೊಡತಕ್ಕದ್ದು ..	2,000	0	0	..	ಜಾಯಿಂಟು ಡಿಕ್ರೀ ಬಾಬತು.	
3	ಬೆಂಗಳೂರಲ್ಲಿರುವ ಮೈಸೂರು ಬ್ಯಾಂಕ್ ಲಿಮಿಟೆಡ್‌ಗೆ ಕೊಡತಕ್ಕದ್ದು ..	500	0	0	..	ಡಿಟೋ	
4	ದಂಡಿನಲ್ಲಿ ಯಿರುವ ಅಬ್ಬಾಯಿಕೆಟ್ಟಿ ಅಂಡ್‌ಕೊಯುವರ ಪಾಹಿಗೆ ..	400	0	0	..	..	
5	ಕವಾಡಿಪ್ಯಾಟೆಯಲ್ಲಿರುವ ನಂಜಪ್ಪನಿಗೆ .	150	0	0	..	..	
6	ಮೈಸೂರಲ್ಲಿಯಿರುವ ಮಿಟ್ಟಾಕೇಟರವರಿಗೆ ..	12	0	0	..	ಮನೆಬಾಡಿಗೆ ಬಾಬತು	
7	ಡಿಟೋ ಯವರಿಗೆ ಕೊಡತಕ್ಕದ್ದು ..	220	0	0	..	ಡಿಕರೀ ಬಾಬತು	
8	ಮೈಸೂರು ಡಿ॥ ಟ್ರೆಜರಿ ಕೆಡೆ ಅಕೌಂಟೆಂಟ್ ಕೋದಂಡ ರಾಮಕೆಟ್ಟಿಗೆ ಕೊಡತಕ್ಕದ್ದು ..	40	0	0	..	ಡಿಟೋ	
9	ಮೈಸೂರಲ್ಲಿಯಿರುವ ನಾಗಂಣನಿಗೆ ಕೊಡತಕ್ಕದ್ದು.	12	0	0	..	ಡಿಟೋ	
10	ಮೈಸೂರಲ್ಲಿಯಿರುವ ಜನರಲ್ ಬ್ಯಾಂಕ್ ಲಿಮಿಟೆಡ್ ಆಫೀಸಿಗೆ ಕೊಡತಕ್ಕದ್ದು ..	20	0	0	..	ಪ್ರಾಮಿಸರಿ ಬಾಬತು	
11	ಮೈಸೂರಲ್ಲಿಯಿರುವ ಷಾಪು ಚಂಗಲರಾಯಕೆಟ್ಟಿಗೆ ಕೊಡತಕ್ಕದ್ದು ..	140	0	0	..	..	
12	ಮೈಸೂರುನಲ್ಲಿಯಿರುವ ತಿ. ಗೋಪಾಲನಾಯಿಡುಗೆ ಕೊಡತಕ್ಕದ್ದು. ..	35	0	0	..	..	
13	ಮೈಸೂರಲ್ಲಿಯಿರುವ ಮನವರಸಾಬಿಗೆ ಕೊಡತಕ್ಕದ್ದು. ..	8	0	0	..	..	

1885ನೇ ಇಸವಿ ಆರ್ಜೀ ನಂಬರ್ 228.

ಮೃತಪಟ್ಟ ಬೆಂಗಳೂರು ಮೆಸವಾರ್ತಪೇಟೆ ವೆಂಕಟ್ರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಅಂಪಣ್ಣನು ಮೃತಪಟ್ಟ ವೆಂಕಟ್ರಾಮಯ್ಯನಿಗೆ ಅವಿಭಕ್ತ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಅಪ್ಪಂಣನು ಬೆಂಗಳೂರು ಮೆಸವಾರ್ತಪೇಟೆ ವಾಸಸ್ಥನಾಗಿ ಮೃತಪಟ್ಟ ವೆಂಕಟ್ರಾಮಯ್ಯನ ಜಿಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಪ್ಪಂಣನ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟ್ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧ.

1885ನೇ ಇಸವಿ ಜುಲೈ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1885ನೇ ಇಸವಿ ಆರ್ಜೀ ನಂಬರ್ 239.

ಮೃತಪಟ್ಟ ದೊಡ್ಡಬಳ್ಳಾಪುರದ ಅಪ್ಪಾಜಿ ವುರಳ್ ರುದ್ರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ದಿಬ್ಬೂರ್ ವೀರಭದ್ರಂಣನು ಮೃತಪಟ್ಟ ಅಪ್ಪಾಜಿ ವುರಳ್ ರುದ್ರಪ್ಪನಿಗೆ ಹೊಸಹಳ್ಳಿಪ್ಪನೆಂಬ ತಮ್ಮ ಮೈನರ್ ಇವನ ಮಕ್ಕಳು ಆಂಣಯ್ಯ, ಪುಟ್ಟಂಣಯ್ಯ ಮೈನರ್‌ಗಳು ಇರುವದ್ದರಿಂದ ಇವರಗಳ ಗಾರ್ಡಿಯ್ ಆದ ವೀರಭದ್ರಂಣನು ಮೃತಪಟ್ಟ ಸದರೀ ಅಪ್ಪಾಜಿ ವುರಳ್ ರುದ್ರಪ್ಪನಿಗೆ ಸೋದರವೂವನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ದೊಡ್ಡಪೇಟೆ ವೀರಭದ್ರಂಣನು ದೊಡ್ಡಬಳ್ಳಾಪುರದ ವಾಸಸ್ಥನಾಗಿ ಮೃತಪಟ್ಟ ರುದ್ರಂಣನ ಜಿಂದಗಿ ಬಗ್ಯಾಗಿಬರತಕ್ಕ ಸಾಲಗಳನ್ನು ವಸೂಲ್ ಮಡುವವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಮೈನರ್‌ಗಳ ಗಾರ್ಡಿಯ್ ವೀರಭದ್ರಂಣನ ಅರ್ಜೀಯನ್ನು 1885ನೇ ಇಸವಿ ಆಗಸ್ಟ್ ತಿಂಗಳ 20ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ರುದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿನ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 10ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ಯ 1885—86ನೇ ಇಸವಿ ಫಾರ್ಥಿವ ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರಿಬಿದನೂರು ತಾಲ್ಲೂಕು ಬಾಬತು ಸರಕಾರ್ ಜಮೀನ್‌ಗಳಲ್ಲಿ ಯಿರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರದಲ್ಲಿ ಡೆಪ್ಯೂಟಿ ಕಮ್ಮಿಷನರ್ ಅಥವಾ ಜನರಲ್ ಅ|| ಕಮ್ಮಿಷನರವರ ರೂಬರೂಲ್, ಸ್ಯ 1885ನೇ ಇಸವಿ ಆಗಸ್ಟ್ ತಾರೀಖು 19ರಲ್ಲು ದಿವಿ 12 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಈ ಹರಾಜು ಪೂರೈಸಿದ ವಜಸೆ ಚಡ ಸವಾಲ್‌ದಾರನು ಹರಾಜ್ ಮೊಬಲಗಿಗೆ ಶೇಕಡಾ 25 ರೂಪಾಯಿ ಮೇರಿಗೆ ಶೇವಣಿ ಯಿಡಬೇಕು. ಪರಾಜ್ ಮಂಜೂರ್ ಮಾಡಲ್ಪಟ್ಟ ಸಂಗತಿಯು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರಿಂದ ಚಡ ಸವಾಲ್‌ದಾರನಿಗೆ ತಿಳಿಸಲ್ಪಟ್ಟ 7 ದಿವಸಗಳ ವಳಗಾಗಿ ಬಾಕೀ ಮೊಬಲಗನ್ನು ಪರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ ವಂದಾಣಿ ಮೇರಿಗೆ ಲೋಕಲ್ ಸೆಸ್ ಸಹಿತ ಪಾವತೀ ಮಾಡಬೇಕು. ಹಾಗೆ ಪಾವತಿ ಮಾಡದೆ ಯಿದ್ದರೆ ಶೇವಣಿ ಯಿಟ್ಟ ಮೊಬಲಗು ಸರಕಾರಕ್ಕು ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಮೇಲ್ ಕಂಡ ಶೇವಣಿ ಮೊಬಲಗನ್ನು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ಮೊಬಲಗನ್ನು ಪಾವತೀ ಮಾಡುವದಕ್ಕೆ ತಪ್ಪಿದರೂ ಬಾಬ್ ವುಸಹಾ ಹರಾಜ್ ಮೊಡಲ್ಪಡುವದು. ಲುಕ್ಸಾನ್ ಮೊಬಲಗು, ತಪ್ಪಿದ ಚಡ ಸವಾಲ್‌ದಾರನಿಂದ ರವಿನ್ಯೂ ಕಂದಾಯದ ಬಾಕೀಯಂತೆ ವಸೂಲ್‌ಮಾಡಲ್ಪಡುವದು.